# ಅಳ್ಳೀಮರ

**ಮಕ್ಕಳು ಕಟ್ಟುವ ಗೂಡಿಗೊಂದಿಷ್ಟು ರೆಂಬೆ ಕೊಂಬೆ ನೆರಳು**

**ಮೈಸೂರು ಜಿ॥ ನಂಜನಗೂಡು ತಾ॥ ಹೆಗ್ಗಡಹಳ್ಳಿ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳ ಪತ್ರಿಕೆ** **ಸಂಚಿಕೆ –7, ಜನವರಿ 2014**

### ಸಂಜೆಯ ಸೊಬಗು

ಮುಸ್ಸಂಜೆ ವೇಳೆಯಲಿ ಸೂರ್ಯ
ಮುಳುಗುವ ಆ ಕ್ಷಣ...
ನೋಡಲು ಹೊರಟರೆ
ಮೈ ಮನ ರೋಮಾಂಚನ!

ಬಾನೆಲ್ಲಾ ಕೆಂಪೇರುವುದು
ಆ ಹೊತ್ತು...
ಅದ ನೋಡಿದರೆ ತಿಳಿಯುವುದು
ಅದರ ಬಗ್ಗೆ ನಿಮಗೇನು ಗೊತ್ತು?

ಹೊತ್ತಿಳಿಯಲಿ ಆಗುವುದು
ಪಕ್ಷಿಗಳ ಹಾರಾಟ
ಇನ್ನೊಂದು ಬದಿಯಲ್ಲಾಗುವುದು
ಮತ್ತಿತರ ಪ್ರಾಣಿಗಳ ಚೀರಾಟ

ನಿಧಾನವಾಗಿ ಮುಳುಗುತ್ತಾ, ಮುಳುಗುತ್ತಾ
ಆಗುವೆ ನೀ ಕಣ್ಮರೆ!
ಜಗತ್ತಿನ ಜೀವಕೋಟಿಗಳಿಗೆ
ಸೂರ್ಯ ನೀನೇ ಆಸರೆ...

**–ಕಾರ್ತಿಕ್ ಶೆಟ್ಟಿ**
9ನೇ ತರಗತಿ, ಸರ್ಕಾರಿ ಪದವಿಪೂರ್ವ ಕಾಲೇಜು,
ಬಿದ್ಕಲ್‌ಕಟ್ಟೆ, ಉಡುಪಿ ಜಿಲ್ಲೆ

### ಬೆಳಕು ಹಂಚಿದ ಬಾಲಕ



**ನಾಟಕ ಬರೆದವರು : ಡಾ. ಆರ್. ವಿ. ಭಂಡಾರಿ**
**ಪಾತ್ರಧಾರಿಗಳು : ಸಂಜಯ್ ಜೆ., ಚಂದನ ಎಚ್. ಎಚ್.**
**9ನೇ ತರಗತಿ ವಿದ್ಯಾರ್ಥಿಗಳು**



ಬೆಳಕು ಹಂಚಿದ ಬಾಲಕ ನಾಟಕದ ದೃಶ್ಯ



ಬೆಳಕು ಹಂಚಿದ ಬಾಲಕ ನಾಟಕದ ದೃಶ್ಯ



ಬೆಳಕು ಹಂಚಿದ ಬಾಲಕ ನಾಟಕದ ದೃಶ್ಯ



ಸಕಾಲ ನಾಟಕದ ಒಂದು ದೃಶ್ಯ



ನಮ್ಮ ಮಕ್ಕಳ ಕಂಸಾಳೆ ನೃತ್ಯ









ಮೇಲಿನ ನಾಲ್ಕು ಚಿತ್ರಗಳು ಇತ್ತೀಚೆಗೆ ಶಾಲೆಯಿಂದ ಪ್ರವಾಸಕ್ಕೆ ಹೋಗಿದ್ದಾಗ ತೆಗೆದದ್ದು

**ಹಕ್ಕಿ ಹಾರುತಿದೆ ನೋಡಿದಿರಾ.....**



**(ಈ ಚಿತ್ರವನ್ನು ಬರಿಯ ಪೆನ್ನು ಬಳಸಿ ರಚಿಸಲಾಗಿದೆ)**
**ಈ ಚಿತ್ರದ ಕಲಾವಿದೆ : ಅನುಷ**
**8ನೇ ತರಗತಿ**
**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕನ್ನಮಂಗಲ.**
**ಶಿಡ್ಲಘಟ್ಟ ತಾ॥ ಚಿಕ್ಕಬಳ್ಳಾಪುರ ಜಿ॥**

**************************************************

## ಮೂರು ಬಣ್ಣದ ಇರುವೆಗಳು

ಒಂದು ಕೆಂಪು ಇರುವೆ ಒಂದು ಕಪ್ಪ ಇರುವೆ ಒಂದು ಬಿಳಿ ಇರುವೆ. ಕೆಂಪು ಇರುವೆಗೆ ಕಪ್ಪು ಇರುವೆ ಮತ್ತು ಬಿಳಿ ಇರುವೆ ಕೇಳುತ್ತವೆ ನೀನು ಯಾಕೆ ಇಷ್ಟು ಕೆಂಪಾಗಿ ಕಾಣಿಸುತ್ತಿಯಾ? ಆಗ ಕೆಂಪು ಇರುವೆ ನಾನು ಮಾನವನ ಕೈಗಳ ಮೇಲೆ ಕುಳಿತು ಅವನನ್ನು ಕಚ್ಚುತ್ತೇನೆ ಅವನ ರಕ್ತವನ್ನು ಹೀರುತ್ತೇನೆ ಅದಕ್ಕೆ ನಾನು ಕೆಂಪಾಗಿ ಕಾಣಿಸುತ್ತೇನೆ ಅನ್ನುತ್ತೆ. ಕಪ್ಪು ಇರುವೆಯನ್ನು ಬಿಳಿ ಇರುವೆ ಕೆಂಪು ಇರುವೆ ಕೇಳುತ್ತಾರೆ 'ನೀನು ಯಾಕೆ ಇಷ್ಟು ಕಪ್ಪಾಗಿ ಕಾಣಿಸುತ್ತೀಯಾ ಅನ್ನುತ್ತಾರೆ. ಆಗ ನಾನು ರೈತನ ಜೊತೆಯಲ್ಲಿ ಬಿಸಿಲಿನಲ್ಲಿ ಓಡಾಡುತ್ತೀನಿ ಅದಕ್ಕೆ ನಾನು ಕಪ್ಪಾಗಿ ಕಾಣಿಸುತ್ತೇನೆ ಅಂದಿತು. ಬಿಳಿ ಇರುವೆಯನ್ನು ಕಪ್ಪು ಮತ್ತು ಕೆಂಪು ಇರುವೆ ಕೇಳುತ್ತಾರೆ 'ನೀನು ಯಾಕೆ ಇಷ್ಟು ಬಿಳಿಯಾಗಿ ಕಾಣಿಸುತ್ತೀಯಾ? ಆಗ ಬಿಳಿ ಇರುವೆ ಹೇಳುತ್ತದೆ ನಾನು ರಾತ್ರಿ ಮಲಗುವಾಗ ಹಾಲು ಕುಡಿದು ಮಲಗುತ್ತೇನೆ ಅದಕ್ಕೆ ನಾನು ಬಿಳಿಯಾಗಿ ಕಾಣಿಸುತ್ತೇನೆ ಎಂದಿತು. ಮೂರು ಜನ ಫ್ರೆಂಡ್ಸ್ ಆಗಿ ಖುಷಿಯಾಗಿ ಇರ್ತಾರೆ

**ಸುಮ ಬಿ. ಎಸ್.**
9ನೇ ತರಗತಿ
ಸ॥ ಪ್ರೌ॥ ಶಾಲೆ, ಹೆಗ್ಗಡಹಳ್ಳಿ

**************************************************

## ಗದ್ದೆ

ಒಂದು ಊರಿನಲ್ಲಿ ಒಬ್ಬ ಬಡವನಿದ್ದ. ಅವನ ಹತ್ತಿರ ಒಂದು ಎಕರೆ ಗದ್ದೆ ಇತ್ತು ಆ ಗದ್ದೆಯಲ್ಲಿ ದಿನಾಲು ಬೇಸಾಯ ಮಾಡುತ್ತಿದ್ದ. ಒಂದು ದಿನ ಬಿತ್ತನೆ ಮಾಡುತ್ತಿದ್ದಾಗ ಜೋರಾಗಿ ಮಳೆ ಬಂದಿತು. ಆಗ ಬಡವನ ಬೆಳೆಯಲ್ಲಾ ನಾಶವಾಯಿತು. ಆಗ ಬಡವನ ಮನೆಯಲ್ಲಿ ಒಂದು ಹೊತ್ತಿನ ಊಟಕ್ಕೂ ಸಂಚಕಾರವಾಗಿ ಏನೂ ತೋಚದೆ ಗದ್ದೆ ಹತ್ತಿರ ಬಂದು ಅಳುತ್ತಿರುವಾಗ ದೇವರು ಪ್ರತ್ಯಕ್ಷಳಾಗಿ 'ನೀನು ಯಾಕೆ ಅಳುತ್ತಾ ಕುಳಿತ್ತಿರುವೆ? ಏನಾಯಿತು ಹೇಳು' ಆಗ ಬಡವನು ದೇವರ ಹತ್ತಿರ ನಾನು ಬಿತ್ತನೆ ಮಾಡುತ್ತಿರುವಾಗ ರಭಸವಾಗಿ ಮಳೆ ಬಂದು ನನ್ನ ಬೆಳೆಯೆಲ್ಲ ಹಾಳಾಯಿತು. ಒಂದು ಹೊತ್ತು ಊಟ ಮಾಡುವುದಕ್ಕೂ ಇಲ್ಲದಂತಾಗಿದೆ ಎಂದು ಹೇಳುತ್ತಾನೆ. ಆಗ ದೇವತೆ 'ಆಗಲಿ ನಿನಗೆ ಏನು ವರ ಬೇಕು ಕೇಳು' ಎಂದು ಕೇಳಿದಾಗ 'ನನಗೆ ಬಿತ್ತನೆ ಮಾಡಲು ದಾನ್ಯವನ್ನು ಕೊಡು ಎಂದು ಕೇಳಿದನು. ಆಗ ದೇವರು ವರವನ್ನು ಕೊಟ್ಟು ಮಾಯವಾದಳು.

**ನಾಗರಾಜು ಡಿ. ಪಿ., ಯೋಗೇಶ ಡಿ. ಪಿ.,ನವೀನ ಡಿ. ಎನ್.,**
**ಗಣೇಶ ಡಿ. ಆರ್., ಸೋಮೇಶ ಡಿ. ಆರ್.**
9ನೇ ತರಗತಿ
ಸ॥ ಪ್ರೌ॥ ಶಾಲೆ, ಹೆಗ್ಗಡಹಳ್ಳಿ

**ಕಳೆದ ಸಂಚಿಕೆಯ ನೆಲ್ಸನ್ ಮಂಡೇಲಾ ಕುರಿತ ಲೇಖನದಲ್ಲಿ ಅವರ ಜನ್ಮ ದಿನಾಂಕ ಕಣ್ತಪ್ಪಿನಿಂದಾಗಿ ತಪ್ಪಾಗಿ ಮುದ್ರಿಸಲಾಗಿತ್ತು. ಹತ್ತನೇ ತರಗತಿಯ ಸಿದ್ಧ ಎಚ್. ಕೆ. ಮತ್ತು ಮನೋಜ ಎಸ್. ಎಂ. ಈ ದೊಡ್ಡ ತಪ್ಪನ್ನು ನನ್ನ ಗಮನಕ್ಕೆ ತಂದರು. ಇವರಿಬ್ಬರನ್ನು ಅಭಿನಂದಿಸುತ್ತಾ ತಪ್ಪಿಗಾಗಿ ಎಲ್ಲಾ ಓದುಗರ ಕ್ಷಮೆಯಾಚಿಸುತ್ತೇನೆ.**

***–ಸಂತೋಷ ಗುಡ್ಡಿಯಂಗಡಿ***

**ನಾನು ಓದಿದ ಪುಸ್ತಕ**

**ಮಹಾಯುದ್ಧ – 1**
**ಲೇಖಕರು : ಪೂರ್ಣಚಂದ್ರ ತೇಜಸ್ವಿ**
**ಕೋಟಾ ನೋಟ್**

ಜರ್ಮನಿ ಮಿತ್ರರಾಷ್ಟ್ರಗಳ ಸೈನ್ಯಕ್ಕೆ ಶರಣಾದ ಕೆಲವೇ ದಿನಗಳಲ್ಲಿ ಆಸ್ಟ್ರಿಯಾದಿಂದ ಒಂದು ಟೆಲಿಫೋನ್ ಕರೆ ಯುರೋಪಿನಲ್ಲಿದ್ದ 'ಬ್ಯಾಂಕ್ ಆಫ್ ಇಂಗ್ಲೆಂಡ್' ಗುಪ್ತಚರ ಭಾಗಕ್ಕೆ ಬಂತು. ಆಸ್ಟ್ರಿಯಾದಲ್ಲಿ ಒಬ್ಬ ಜರ್ಮನ್ ಕ್ಯಾಪ್ಟನ್ ಒಂದು ಲಾರಿ ಭರ್ತಿ ಇಂಗ್ಲೆಂಡಿನ ನೂರು ಪೌಂಡ್ ನೋಟುಗಳನ್ನು ತಂದೊಪ್ಪಿಸಿ ಶರಣಾಗಿದ್ದಾನೆ ಎಂದು ಆ ಕರೆಯಲ್ಲಿ ವರದಿಯಾಯ್ತು. ಅಲ್ಲದೆ ರಾಶಿ ಪೌಂಡ್ ನೋಟುಗಳ ಕಂತೆಗಳು ಆಸ್ಟ್ರಿಯಾದ ಎನ್ಸ್ ನದಿಯಲ್ಲಿ ತೇಲಿ ಬರುತ್ತಿವೆಯೆಂದೂ, ಸಾರ್ವಜನಿಕರು ಮತ್ತು ಮಿತ್ರರಾಷ್ಟ್ರಗಳ ಸೈನಿಕರು ಈಜುಬಿದ್ದು ಅವನ್ನೆಲ್ಲ ಸಂಗ್ರಹಿಸುವುದರಲ್ಲಿ ನಿರತರಾಗಿದ್ದಾರೆಂದೂ ಟೆಲಿಫೋನಿನಲ್ಲಿ ಮಾತಾಡುತ್ತಿದ್ದವ ಹೇಳಿದ. ಒಂದು ಲಾರಿ ಲೋಡು ನೂರು ಪೌಂಡುಗಳ ನೋಟುಗಳೆಂದರೆ ನಲವತ್ತೊಂದು ಮಿಲಿಯನ್ ಪೌಂಡುಗಳಷ್ಟಾಗುತ್ತದೆ! ಆಸ್ಟ್ರಿಯಾದ ವರದಿಯಿಂದ ಗಾಬರಿ ಬಿದ್ದ ಸಂಸ್ಥೆ, ನಿಷ್ಣಾತ ಕೋಟಾ ನೋಟು ಪತ್ತೇದಾರ 'ಜಾರ್ಜ್ ಮಕ್ನೆಲ್ಲೀ'ಯನ್ನು ಆಸ್ಟ್ರಿಯಾಗೆ ತನಿಖೆ ಮಾಡಲು ಕಳಿಸಿತು.

ಜರ್ಮನ್ ಕ್ಯಾಪ್ಟನ್ ಮತ್ತು ಅವನ ಲಾರಿಯನ್ನು ಮಿಲಿಟರಿ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಲಾರಿಯಲ್ಲಿ ಇಪ್ಪತ್ತಮೂರು ದೊಡ್ಡ ದೊಡ್ಡ ಪೆಟ್ಟಿಗೆಗಳಿದ್ದವು. ಅವುಗಳೆಲ್ಲವೂ ಹೊಚ್ಚಹೊಸ ಬ್ಯಾಂಕ್ ಆಫ್ ಇಂಗ್ಲೆಂಡ್ ನೋಟುಗಳಾಗಿದ್ದವು. ಒಂದೊಂದು ಪೆಟ್ಟಿಗೆಯಲ್ಲೂ ಐದು ಮಿಲಿಯನ್ ಬೆಲೆಯ ನೋಟುಗಳು! ಜಾರ್ಜ್ ಭೂತಕನ್ನಡಿಯಲ್ಲಿ ಇರಲಿ, ಮೈಕ್ರಾಸ್ಕೋಪಿನಲ್ಲಿ ನೋಡಿದರೂ ಅವನ್ನು ಕೋಟಾ ನೋಟುಗಳೆಂದು ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ಸಾಚಾ ನೋಟುಗಳಿಗೂ ಅವಕ್ಕೂ ಯಾವ ವ್ಯತ್ಯಾಸವೂ ಇರಲಿಲ್ಲ. ಜಾರ್ಜ್ ಕೂಡಲೇ ಇಂಗ್ಲೆಂಡಿನ ಅಧಿಕಾರಿಗಳಿಗೆ ಈ ವಿಚಾರ ಫೋನ್ ಮಾಡಿ ತಿಳಿಸಿದ. ಕೊಂಚ ಹೊತ್ತಿನಲ್ಲೇ ಬ್ಯಾಂಕ್ ಆಫ್ ಇಂಗ್ಲೆಂಡ್ ಗೌರ್‍ನರಿಂದಲೇ ನೇರವಾಗಿ ಟೆಲಿಫೋನ್ ಕರೆ ಬಂತು. ಜಾರ್ಜ್ ತಾನು ನೋಡುತ್ತಿರುವುದನ್ನು ತಿಳಿಸಿದ ಕೂಡಲೇ ಫೋನಿನ ಆಚೆ ತುದಿಯಿಂದ ದಿಗ್ಭ್ರಾಂತಿಯ ನಿಟ್ಟುಸಿರೊಂದು ಪ್ರತ್ಯುತ್ತರವಾಗಿ ಕೇಳಿಬಂತು. ಮಾರನೆ ದಿನವೇ ಬ್ಯಾಂಕ್ ಆಫ್ ಇಂಗ್ಲೆಂಡ್ ಪಿ.ಜಿ. ರೀವ್ಸ್ ಎಂಬೊಬ್ಬ ವಿಶೇಷ ತನಿಖಾಧಿಕಾರಿಯನ್ನು ಕಳಿಸಿತು. ಆ ನೋಟುಗಳನ್ನು ಪೆಟ್ಟಿಗೆ ಸಮೇತ ಸುಭದ್ರ ಕೋಣೆಯಲ್ಲಿ ಬಲವಾದ ಮಿಲಿಟರಿ ಕಾವಲಿನಲ್ಲಿ ಇಡಲಾಗಿತ್ತು.

**ಭಾಗ್ಯಲಕ್ಷ್ಮಿ ಬಿ.**
9ನೇ ತರಗತಿ
ಸ॥ ಪ್ರೌ॥ ಶಾಲೆ, ಹೆಗ್ಗಡಹಳ್ಳಿ

## ಒಂದು ನರಿ ಮತ್ತು ಒಂದು ಹುಂಜ

ಒಂದು ಸಲ ಎರಡು ಹುಂಜಗಳು ಒಟ್ಟಿಗೆ ಕಾದಾಡಿದವು. ಒಂದು ಇನ್ನೊಂದನ್ನು ಸೋಲಿಸಿತು. ಅದಕ್ಕೆ ಬಹಳ ಜಂಬ ಬಂದಿತು. ಆದ್ದರಿಂದ ಅದು ಒಂದು ಮೋಟು ಗೋಡೆಯನ್ನು ಹತ್ತಿತ್ತು. ಅದರ ಮೇಲೆ ನಿಂತು "ಕ್ಕೋ ಕ್ಕೋ ಕ್ಕೋ" ಎಂದು ಕೂಗಲಾರಂಭಿಸಿತು.

ಹತ್ತಿರದಲ್ಲೇ ಹೋಗುತ್ತಿದ್ದ ಒಂದು ನರಿ ಹುಂಜವನ್ನು ನೋಡಿತು. ಅದು ಕೊಬ್ಬಿದ ಹುಂಜವಾಗಿತ್ತು. ಹೇಗಾದರೂ ಅದನ್ನು ತಿನ್ನಬೇಕೆಂದು ಅದಕ್ಕೆ ಆಸೆ ಆಯಿತು. ಆದ್ದರಿಂದ ಅದೊಂದು ತಂತ್ರವನ್ನು ಯೋಚಿಸಿತು. ಅದು ಹುಂಜವನ್ನು ಹೊಗಳಿ "ಓ! ಹುಂಜರಾಜ! ನಿಮ್ಮಪ್ಪನಿಗೆ ಮಧುರ ಕಂಠ ಇತ್ತು ಮತ್ತು ಕಣ್ಣು ಮುಚ್ಚಿಕೊಂಡು ಚೆನ್ನಾಗಿ ಹಾಡುತ್ತಿದ್ದ. ಅವನಿಗಿಂತಲೂ ನಿನ್ನ ಕಂಠ ಮಧುರವಾಗಿದೆ, ನೀನೊಂದು ಸಾರಿ ಕಣ್ಣು ಮುಚ್ಚಿಕೊಂಡು ಹಾಡಿಬಿಟ್ಟರೆ ನನಗೆ ತುಂಬಾ ಸಂತೋಷವಾಗುತ್ತದೆ" ಎಂದಿತು.

ಒಣಜಂಬದ ಹುಂಜಕ್ಕೆ ಮುಖಸ್ತುತಿಗೆ ಸಂತೋಷವಾಗಿಬಿಟ್ಟಿತು. ಅದು ಕಣ್ಣು ಮುಚ್ಚಿಕೊಂಡು ಕೂಗಲಾರಂಭಿಸಿತು. ತಕ್ಷಣವೇ ನರಿ ಅದರ ಮೇಲೆ ಹಾರಿ ಹುಂಜವನ್ನು ಹೊತ್ತುಕೊಂಡು ಹೊರಟುಹೋಯಿತು.

**ಸಂಗ್ರಹ – ವಿಮಲ ಎಂ. ಎಂ.**
9ನೇ ತರಗತಿ
ಸ॥ ಪ್ರೌ॥ ಶಾಲೆ, ಹೆಗ್ಗಡಹಳ್ಳಿ

## ಬೆನ್ಬಲ

ನಿಮ್ಮ ಶಾಲೆಯ ಪತ್ರಿಕೆಯನ್ನು ನೋಡಿದೆ. ಅರಳಿಮರದ ಕಲ್ಪನೆ ಸಾಕಾರಗೊಳ್ಳಲಿ

**– ಡಾ. ನಾ. ಡಿಸೋಜ**
ಹಿರಿಯ ಸಾಹಿತಿಗಳು, ಸಾಗರ

It is really happy to read the articles from village sutdents and it is quite interesting and educative. I am happy that your school got an active and teacher and I wish the name of your school be known as a model school in the state.

**– chandrashekar k n**
chief manager
state bank of mysore
banashankari branch.

ನಮಸ್ಕಾರ, "ಅಳ್ಳೀಮರ"ದಂತಹ ನಿಮ್ಮ ಅದ್ಭುತ ಪ್ರಯತ್ನಕ್ಕೆ ಅಭಿನಂದನೆಗಳು. ನನಗೆ ಪ್ರತಿ ಕಳುಹಿಸಿದ್ದಕ್ಕೆ ಧನ್ಯವಾದಗಳು, ದಯಮಾಡಿ ಮುಂದುವರೆಸಿ.

**– ಹೆಚ್. ವಿ. ವೆಂಕಟೇಶಪ್ಪ**
ಡಿಡಿಪಿಐ
ಟಿ.ಬಿ.ಎಫ್. ಮತ್ತು ಎಸ್.ಡಬ್ಲ್ಯೂ.ಎಫ್.
ಶಿಕ್ಷಕರ ಸದನ, ಬೆಂಗಳೂರು

ಅಳ್ಳೀಮರ ಪತ್ರಿಕೆಯ ಸಾಫ್ಟ್ ಪ್ರತಿಯನ್ನು ನೋಡಿದೆ. ಚೆನ್ನಾಗಿ ಬರುತ್ತಿದೆ. ಸಾಹಿತಿಗಳ ಸಂದರ್ಶನ ಎಲ್ಲಾ ಸೊಗಸಾಗಿ ಮೂಡಿ ಬಂದಿದೆ. ಮತ್ತಷ್ಟು ಉತ್ತಮ ಲೇಖನಗಳು, ಚಿತ್ರಗಳು ಪ್ರದರ್ಶನಗೊಳ್ಳಲು ಅದು ವೇದಿಕೆಯಾಗಲಿ ಎಂದು ಆಶಿಸುವೆ

**– ಡಾ. ಸಿದ್ಧರಾಜು ಕೊತ್ತತ್ತಿ**
ಮುಖ್ಯಲೆಕ್ಕಾಧಿಕಾರಿಗಳು
ಜಿಲ್ಲಾ ಪಂಚಾಯತ್ ಮೈಸೂರು

**************************************************

**ನಾಳೆಗಳು ನಮ್ಮದು**

ನಮ್ಮ ಶಾಲಾ ಆವರಣದಲ್ಲಿನ ಐದು ಮರಗಳು ನಮ್ಮ ಮಕ್ಕಳ ಹೊಸ ಕೊಡಲಿಗಳಿಗಾಗಿ ತಮ್ಮ ಜೀವತೆತ್ತಿವೆ. ಮರಗಳನ್ನು ಬೆಳೆಸುವ ಮನಸ್ಸು ನಮ್ಮಲ್ಲಿದೆ. ಆದರೆ ನಮ್ಮ ಆವರಣದಲ್ಲಾದ ಬದಲಾವಣೆಯೊಂದನ್ನು ಹಂಚಿಕೊಳ್ಳಲೇಬೇಕಿದೆ. ಮೂರು ಗಸಗಸೆ ಮರಕ್ಕೆ ಬರುತ್ತಿದ್ದ ವಿವಿಧ ರೀತಿಯ ಪುಟ್ಟ ಪುಟ್ಟ ಹಕ್ಕಿಗಳು ಕಣ್ಮರೆಯಾಗಿವೆ. ಇದಂತೂ ಬಹಳ ದುಃಖದ ವಿಷಯ. ಹೊಸ ಕಟ್ಟಡ ನಿರ್ಮಾಣದ ಬೆನ್ನಲ್ಲೇ ಗಸಗಸೆ ಸಸಿಗಳನ್ನ ಹಾಕಿ ಹಕ್ಕಿಗಳನ್ನ ಕರೆತರುವ ದೊಡ್ಡ ಜವಾಬ್ದಾರಿ ಹೆಗಲಲ್ಲಿದೆ. ನಮ್ಮ ಶಾಲಾ ಆವರಣ ಕಟ್ಟಡ ನಿರ್ಮಾಣದ ಚಟುವಟಿಕೆಯಿಂದಾಗಿ ರಣರಂಗದಂತೆ ಕಾಣುತ್ತಿದೆ. ಬಹುಶಃ ಇದು ಹಕ್ಕಿಗಳಿಗೆ ಅರ್ಥವಾಗಿರಬೇಕು, ಅದಕ್ಕೇ ಅವಿಲ್ಲ! ನಾಳೆಗೆ ನಿಮ್ಮನ್ನ ಖಂಡಿತಾ ಬರಮಾಡಿಕೊಳ್ಳುತ್ತೇವೆ ಭರವಸೆಯೊಂದಿಗೆ ಈ ಸಂಚಿಕೆ

**– ಸಂಪಾದಕ**


**ವಿಳಾಸ : ಸಂಪಾದಕರು, ಅಳ್ಳೀಮರ**
**ಸರ್ಕಾರಿ ಪ್ರೌಢ ಶಾಲೆ, ಹೆಗ್ಗಡಹಳ್ಳಿ**
**ನಂಜನಗೂಡು ತಾ. ಮೈಸೂರು ಜಿ. 571314**
**Email : sguddiyangadi@gmail.com**
**www.allimara.blogspot.com**
**ಸಂಚಾರಿ ದೂ. ವಾಣಿ : 9449331551**